ಸಮಸ್ಯೆಗಳ ಬಗ್ಗೆ ನನಗೆ ಅರ್ಥವಾಗಿದೆ. ಓಸ್ವಾಲ್ ಕಂಪನಿಯ ಮಾಲೀಕ ಓಸ್ವಾಲ್ ಪಂಜಾಬ್‌ನಲ್ಲಿ ಎಲ್ಲೋ ಒಂದು ಕಡೆ ಇದ್ದಾರೆ. ನಾವು ಸುಮಾರು 100 ಪತ್ರಗಳನ್ನು ಬರೆದಿದ್ದೇವೆ, 8 ಲೀಗಲ್ ನೋಟೀಸ್‌ಗಳನ್ನು ಸಹ ಕಳುಹಿಸಿದ್ದೇವೆ, ಪೋಲೀಸ್ ಮೂಲಕ ರಿಜಿಸ್ಟರ್ಡ್ ಪೋಸ್ಟನ್ನು ಕೂಡ ಕಳುಹಿಸಿದ್ದೇವೆ, ಇಷ್ಟೆಲ್ಲಾ ಆದರೂ ಆತ ಸಿಗುತ್ತಿಲ್ಲ. ಆತನದ್ದೇ 51 ಪರ್ಸೆಂಟ್ ಷೇರ್ ಇರುವುದರಿಂದ ಆತನನ್ನು ಕಿತ್ತು ಹಾಕಬೇಕಾದರೆ ಬೋರ್ಡ್ ರೆಸೆಲ್ಯೂಷನ್ ಆಗಬೇಕಾಗುತ್ತದೆ. ಆದಕಾರಣ ಇದರಲ್ಲಿ ಟೆಕ್ನಿಕಲ್ ಅಂಡ್ ಲೀಗಲ್ ಪ್ರಾಬ್ಲಮ್ಸ್ ಇರುವುದರಿಂದ, ಆ ಕಾರ್ಖಾನೆಯನ್ನು ನಡೆಸುವುದಕ್ಕೆ ಸಾಧ್ಯ ಆಗುವುದಿಲ್ಲವಾದ್ದರಿಂದ ನಾವು ಸಿಂಹಪುರಿ ಎನ್ನುವ ಒಬ್ಬ ಆಂಧ್ರ ಎಂಟರ್‌ಪ್ರೀನ್ಯೂರ್‌ಯವರನ್ನು ಕರೆದುಕೊಂಡು ಬಂದು ಹಣ್ಣುಗಳನ್ನು ಪ್ರೊಕ್ಯೂರ್‌ಮೆಂಟ್ ಮಾಡುವುದಕ್ಕೆ ಈಗಾಗಲೇ ಸರ್ಕಾರ ವ್ಯವಸ್ಥೆ ಮಾಡಿದೆ. ಇವೊತ್ತಿನವರೆಗೂ ಕೂಡ ಆ ಭಾಗದ ರೈತರನ್ನು, ಶಾಸಕರನ್ನು ನಾನು ಕಾಣುತ್ತಲಿದ್ದೇನೆ. ಹಣ್ಣುಗಳ ಪ್ರೊಕ್ಯೂರ್‌ಮೆಂಟ್‌ನಲ್ಲಿ ಯಾವ ಸಮಸ್ಯೆ ಕೂಡ ಇರುವುದಿಲ್ಲ. ಒಂದು ವೇಳೆ ಇದ್ದರೂ ಸಣ್ಣಪುಟ್ಟವುಗಳಿರಬಹುದು. ಅಂಥ ಸಮಸ್ಯೆಗಳನ್ನು ಕೂಡ ಪರಿಹರಿಸುವುದಕ್ಕೆ ನಾವು ಸಿದ್ಧರಿದ್ದೇವೆ. ಇಂದು ಓಸ್ವಾಲ್ ಕಂಪನಿಯನ್ನು ಪ್ರಾರಂಭಿಸಬೇಕೋ ಬೇಡವೋ ಎಂಬ ಬಗ್ಗೆ ಲೀಗಲ್ ಸಮಸ್ಯೆ ಏನಿದೆ ಅದರ ಬದಲು ಹೊಸ ಕಾರ್ಖಾನೆ ತೆಗೆಯಲು ಒಂದಿಬ್ಬರು ಎಂಟರ್‌ಪ್ರೀನರಿಗಳು ಮುಂದೆ ಬಂದಿದ್ದಾರೆ, ಅವರು ಹರಿಹರ, ದಾವಣಗೆರೆ ಮತ್ತು ಶಿವಮೊಗ್ಗ ಸಮೀಪ ಕಾರ್ಖಾನೆ ತೆರೆಯುತ್ತೇವೆಂದು ಹೇಳಿದ್ದಾರೆ. ಅವರಿಗೆ ಸರ್ಕಾರದಿಂದ ಎಲ್ಲಾ ಬೆಂಬಲವನ್ನು ಕೊಟ್ಟು ಮುಂದಿನ ದಿನಗಳಲ್ಲಿ ರೈತರಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಸಿದ್ಧವಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಹೊಸ ಬಸ್ಸುಗಳ ಖರೀದಿ

427 - ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಪ್ರತಿದಿನ ಓಡುತ್ತಿರುವ ಬಸ್‌ಗಳ ಸಂಖ್ಯೆ ಎಷ್ಟು?*

ಆ) *ಈ ಬಸ್‌ಗಳಲ್ಲಿ ಪ್ರತಿದಿನ ಸಂಚರಿಸುವ ಪ್ರಯಾಣಿಕರ ಸರಾಸರಿ ಸಂಖ್ಯೆ ಎಷ್ಟು?*

ಇ) *2000-2001ನೇ ಸಾಲಿನಲ್ಲಿ ಹೊಸದಾಗಿ ಖರೀದಿಸಲಿರುವ ಹೊಸ ಬಸ್‌ಗಳ ಸಂಖ್ಯೆ ಎಷ್ಟು?*

ಈ) *ಇವುಗಳಿಗೆ ತಗಲುವ ವೆಚ್ಚವೆಷ್ಟು?*

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ (ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಸೇರಿದಂತೆ) ಪ್ರತಿದಿನ 11060 ವಾಹನಗಳು ಕಾರ್ಯಾಚರಣೆಯಲ್ಲಿರುತ್ತವೆ.

ಅ) ಈ ವಾಹನಗಳಲ್ಲಿ ಪ್ರತಿದಿನ ಅಂದಾಜು 76 ಲಕ್ಷ ಪ್ರಯಾಣಿಕರು ಸಂಚರಿಸುತ್ತಾರೆ.

ಇ) 2000-2001ನೇ ಸಾಲಿನಲ್ಲಿ 2020 ವಾಹನಗಳನ್ನು ಖರೀದಿಸುವ ಯೋಜನೆಯನ್ನು ಹೊಂದಿದೆ.

ಈ) ರೂ. 194.08 ಕೋಟಿ.

ಶ್ರೀ ಕಟ್ಟಾ ಸುಬ್ಬಮ್ಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ಇಲ್ಲಿ ಕೊಟ್ಟಿರತಕ್ಕ ಉತ್ತರದಲ್ಲಿ 11,060 ವಾಹನಗಳು ಪ್ರತಿದಿನ ಕಾರ್ಯಾಚರಣೆಯಲ್ಲಿವೆಯೆಂದು ಮಾನ್ಯ ಸಚಿವರು ಹೇಳಿದ್ದಾರೆ. ಇದರಲ್ಲಿ ಇನ್ನೂ ಆಯಸ್ಸು ಇರುವಂಥ ಬಸ್‌ಗಳ ಸಂಖ್ಯೆ ಎಷ್ಟು? ಮತ್ತು ಆಯಸ್ಸು ಮೀರಿ ಪ್ರತಿದಿನ ಬಸ್‌ಗಳು ಸಂಚಾರ ಮಾಡಿ, ಪರಿಸರ ಮಾಲಿನ್ಯ ಮಾಡಿ, ಬ್ರೇಕ್ ಫೇಲ್ ಆಗಿ ಅಪಘಾತ ಮಾಡುತ್ತಿರುವಂಥ ವಾಹನಗಳ ಸಂಖ್ಯೆ ಎಷ್ಟು? ಇನ್ನು ಉತ್ತರದಲ್ಲಿ ಪ್ರತಿ ದಿನ 76 ಲಕ್ಷ ಪ್ರಯಾಣಿಕರು ಸಂಚಾರ ಮಾಡುತ್ತಿದ್ದಾರೆ. ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಒಟ್ಟಾರೆ ಬೇಕಾಗಿರುವ ಬಸ್‌ಗಳ ಸಂಖ್ಯೆ ಎಷ್ಟು? ಓಡಾಡುತ್ತಿರುವ ಜನರ ಸಂಖ್ಯೆ ಎಷ್ಟು? ಬಸ್‌ಗಳ ಕೊರತೆ ಎಷ್ಟಿದೆ ಎಂಬ ಬಗ್ಗೆ ಮಾನ್ಯ ಸಚಿವರು ದಯವಿಟ್ಟು ತಿಳಿಸಬೇಕು.

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಮೊದಲನೆ ಪ್ರಶ್ನೆಗೆ ಉತ್ತರವಾಗಿ, ಈ ಸಂಸ್ಥೆ ಒಟ್ಟು 11060 ವಾಹನಗಳನ್ನು ಹೊಂದಿದೆ. 2000-2001ನೇ ಇಸವಿಗೆ ನಾವು ಬದಲಾವಣೆಗೆ ಅಂದಾಜು ಮಾಡಿಕೊಂಡಿರುವ ವಾಹನಗಳು 2020. ಇದರಲ್ಲಿ ವಾಹನಗಳು ಯಾವ್ಯಾವ ಸಂಸ್ಥೆಗೆ ಎಷ್ಟೆಷ್ಟು ಬದಲಾವಣೆಯಾಗಬೇಕು? ಯಾವ್ಯಾವ ಮಾರ್ಗಗಳಲ್ಲಿ ಹೊಸ ಬಸ್ಸುಗಳನ್ನು ಓಡಿಸಬೇಕೆನ್ನುವುದರ ಬಗ್ಗೆ ಒಂದು ಕಾರ್ಯಕ್ರಮ ಹಮ್ಮಿಕೊಂಡಿದೆ. ಆದರ ಪ್ರಕಾರ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಈ ವ್ಯವಸ್ಥೆಯಲ್ಲಿ ಈ ವರ್ಷದಲ್ಲಿ 503 ಹಳೆಯ ಬಸ್ಸುಗಳನ್ನು ಬದಲು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆಯಲ್ಲಿ 450 ಹಳೆಯ ಬಸ್ಸುಗಳನ್ನು ಬದಲಾವಣೆ ಮಾಡಬೇಕು, ಈಶಾನ್ಯ ಕರ್ನಾಟಕ ಸಾರಿಗೆ ಸಂಸ್ಥೆಯಲ್ಲಿ 170 ವಾಹನಗಳನ್ನು ಬದಲಾವಣೆ ಮಾಡಬೇಕೆಂದು ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಹೀಗಾಗಿ ಒಟ್ಟು ಹೊಸ ಮಾರ್ಗಗಳಲ್ಲಿ ನಾವು ಹೊಸ 699 ಬಸ್ಸುಗಳನ್ನು ಚಾಲನೆಗೆ ತರುವುದರ ಜೊತೆಗೆ1321 ಹಳೆಯ ಬಸ್ಸುಗಳನ್ನು ಬದಲು ಮಾಡುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಮಾನ್ಯ ಸದಸ್ಯರು ಪರಿಸರ ಮಾಲಿನ್ಯದ ಬಗ್ಗೆ ಹೇಳಿದರು, ಅದಕ್ಕೆ ವ್ಯವಸ್ಥಿತವಾದ ಕಾರ್ಯಕ್ರಮವನ್ನು ಸಾರಿಗೆ ಸಂಸ್ಥೆಯಿಂದ ನಾವು ಹಮ್ಮಿಕೊಂಡಿದ್ದೇವೆ. ನಾವು ನಮ್ಮ ಇಲಾಖೆಯಲ್ಲಿ ಎಮಿಷನ್-ಟೆಸ್ಟಿಂಗ್ ಮೆಷಿನ್‌ಗಳನ್ನು ಇಟ್ಟಿದ್ದೇವೆ. ಹೊಗೆ ಉಗುಳುವ ವಾಹನಗಳನ್ನು ತಕ್ಷಣ ನಮ್ಮ ಕಾರ್ಯಗಾರಕ್ಕೆ ತೆಗೆದುಕೊಂಡು ಹೋಗಿ ದುರಸ್ತಿ ಮಾಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ಸಾರ್ವಜನಿಕರು ಯಾರೇ ಆಗಲಿ ಅಂತಹ ಹೊಗೆ ಉಗುಳುವ ವಾಹನಗಳು ಕಂಡಲ್ಲಿ ತಕ್ಷಣ ನಮಗೆ ವರ್ತಮಾನ ಕೊಟ್ಟಲ್ಲಿ ನಾವು ಆ ಬಸ್ ಅನ್ನು ನಿಲ್ಲಿಸುತ್ತೇವೆನ್ನುವ ಹೇಳಿಕೆಯನ್ನು ಕೊಟ್ಟಿದ್ದೇವೆ. ಇದಕ್ಕಾಗಿ ಎಲ್ಲಾ ಬಸ್ ನಿಲ್ದಾಣಗಳಲ್ಲಿ ಪ್ರಚಾರವನ್ನು ಸಹ ನೀಡಿದ್ದೇವೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಹಾಲಿ ಸಂಚಾರ ಮಾಡುತ್ತಿರುವಂತಹ ಬಸ್ಸುಗಳ ಸಂಖ್ಯೆ ಎಷ್ಟು ಹಾಗೂ ಬೇಕಾಗಿರುವ ಬಸ್ಸುಗಳ ಸಂಖ್ಯೆ ಎಷ್ಟು?

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ದಿನನಿತ್ಯ 76 ಲಕ್ಷ ಪ್ರಯಾಣಿಕರು ಸಂಚರಿಸುತ್ತಾರೆ ಎಂದು ನಾವು ಮಾಹಿತಿಯನ್ನು ಕೊಟ್ಟಿದ್ದೇವೆ. ಹಿಂದಿನ ಸರ್ಕಾರದಲ್ಲಿ ಮಾನ್ಯ ಸಿಂಧ್ಯರವರು ಇದ್ದಂತಹ ಸಂದರ್ಭದಲ್ಲಿ ಇಡೀ ರಾಜ್ಯಾದ್ಯಂತ ಸಾರಿಗೆ ಅದಾಲತ್ ನಡೆಸುವುದರ ಜೊತೆಗೆ ಪ್ರಯಾಣಿಕರ ದಿನನಿತ್ಯ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಮೂರು ಸಾವಿರಕ್ಕೆ ಮೀರಿ ಹೊಸ ಬಸ್ಸುಗಳು ಬೇಕು ಎಂದು ಒಂದು ವಿಚಾರ ನಮ್ಮ ಸಂಸ್ಥೆ ಮುಂದಿದೆ. ಪಟ್ಟಣ ಪ್ರದೇಶದ ವ್ಯಾಪ್ತಿಯಲ್ಲಿ ನಾವು ಗುತ್ತಿಗೆ ಆಧಾರದ ಮೇಲೆ ವಾಹನಗಳನ್ನು ಕೊಂಡು ಸಂಚರಿಸುವಂತೆ ಮಾಡಲು ತೀರ್ಮಾನ ಮಾಡಿದ್ದೇವೆ. ಈಗಾಗಲೇ ನಮ್ಮಲ್ಲಿ 103 ಬಸ್ಸುಗಳು ಗುತ್ತಿಗೆ ಆಧಾರದ ಮೇಲೆ ಪಟ್ಟಣದಲ್ಲಿ ಸಂಚರಿಸುತ್ತಿವೆ. ಇನ್ನು ಬೇರೆ ಬೇರೆ ಪಟ್ಟಣಗಳಲ್ಲಿ ಇದನ್ನು ವಿಸ್ತಾರ ಮಾಡಬೇಕೆಂದು ಹೇಳುವಂತಪ ವಿಚಾರ ಸಂಸ್ಥೆ ಮುಂದಿದೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಇನ್ನು ರಾಜ್ಯದಲ್ಲಿ 8202 ಗ್ರಾಮಗಳಿಗೆ ಯಾವುದೇ ಬಸ್ಸು ಸಂಪರ್ಕ ಇಲ್ಲ. ಹಾಗಿದ್ದಾಗ ಕರ್ನಾಟಕ ರಾಜ್ಯದಲ್ಲಿ ಇನ್ನು 8202 ಗ್ರಾಮಗಳಿಗೆ ಯಾವಾಗ ಬಸ್ ಸಂಪರ್ಕ್ ಕಲ್ಪಿಸಿಕೊಡುತ್ತೀರಿ ಎಂದು ತಿಳಿಸಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವಂತೆ ಈ ರಾಜ್ಯದಲ್ಲಿ ಇನ್ನು ಅನೇಕ ಗ್ರಾಮಗಳಿಗೆ ನಮ್ಮ ಬಸ್ಸಿನ ಸೌಕರ್ಯವನ್ನು ಒದಗಿಸಿಕೊಡುವುದು ಬಾಕಿ ಇದೆ. ಕಾರಣವೇನೆಂದರೆ, ಅನೇಕ ಹಳ್ಳಿಗಳಿಗೆ ಉತ್ತಮ ಸ್ಥಿತಿಯಲ್ಲಿ ಇರುವಂತಹ ರಸ್ತೆಗಳು ಇಲ್ಲದೇ ಇರುವುದರಿಂದ ಕೆಲವು ಕಡೆ ಬಸ್ಸು ಅಥವಾ ವಾಹನಗಳು ಸಾಧ್ಯವಾಗಿಲ್ಲ. ನನ್ನ ಹತ್ತಿರ ಮಾಹಿತಿ ಲಭ್ಯವಿರುವಂತೆ 1569 ಹಳ್ಳಿಗಳಿಗೆ ನಾವು ಇವತ್ತಿನವರೆಗೂ ಬಸ್ಸಿನ ಸಂಚಾರವನ್ನು ವ್ಯವಸ್ಥಿತವಾಗಿ ಒದಗಿಸಿಕೊಡುವುದಕ್ಕೆ ಸಾಧ್ಯವಾಗಿಲ್ಲ. ಮುಂದಿನ ದಿನಗಳಲ್ಲಿ ಪಂತ ಹಂತವಾಗಿ ಆ ರಸ್ತೆಗಳ ದುರಸ್ತಿ ಆದನಂತರ, ವಾಹನಗಳ ಸಂಚಾರಕ್ಕೆ ಅವು ಯೋಗ್ಯವಾದಾಗ ಬಸ್ಸಿನ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಕಳೆದ ಒಂದು ವರ್ಷದಲ್ಲಿ ಎಷ್ಟು ಕೆ.ಎಸ್.ಆರ್.ಟಿ.ಸಿ ಬಸ್ಸುಗಳು ಅಪಘಾತಕ್ಕೆ ಒಳಗಾಗಿವೆ? ಅದರಿಂದ ಎಷ್ಟು ಜನರು ಸಾವಿಗೀಡಾಗಿದ್ದಾರೆ? ಸರ್ಕಾರದವರು ಅವರಿಗೆ ಎಷ್ಟು ಪರಿಹಾರ ಕೊಟ್ಟಿದ್ದಾರೆ ಎನ್ನುವ ಮಾಹಿತಿ ಬೇಕು. ಈ ನಿಟ್ಟಿನಲ್ಲಿ ರಾತ್ರಿ ವೇಳೆ ಹೊರಡುವಂತಹ ಬಸ್ಸಿಗೆ ಕಂಡಕ್ಟರ್‌ಗಳನ್ನು ಕಡ್ಡಾಯವಾಗಿ ಕೊಡುತ್ತೀರಾ? ಹಾಗೂ ಕೋಟಿ ರೂಪಾಯಿಗಳಷ್ಟು ಲಾಭ ಮಾಡುವಂತಹ ಮಂಗಳೂರು ಘಟಕಕ್ಕೆ ಏರ್‌ಕಂಡೀಷನ್ಡ್ ಬಸ್ಸುಗಳನ್ನು ಕೊಡುತ್ತೀರಾ ಎಂದು ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು, ಅಪಘಾತಕ್ಕೆ ಒಳಗಾಗಿದ್ದು, ಎಷ್ಟು ಪ್ರಾಣ ಹಾನಿಯಾಗಿದೆ ಹಾಗೂ ಗಾಯಾಳುಗಳ ಸಂಖ್ಯೆ ಬಗ್ಗೆ ಏನು ಕೇಳಿದ್ದಾರೆ. ಅದಕ್ಕೆ ಪ್ರತ್ಯೇಕವಾದಂತಹ ಪ್ರಶ್ನೆ ಕೇಳಲಿ, ಅದಕ್ಕೆ ನಾನು ಉತ್ತರ ಕೊಡುತ್ತೇನೆ. ಹಾಗೂ

ನಿರ್ವಾಹಕನಿರುವಂತಹ ವ್ಯವಸ್ಥಿತವಾದಂತಹ ವಾಹನವನ್ನು ಒದಗಿಸಿಕೊಡಬೇಕೆಂದು ಅನೇಕ ದಿನಗಳಿಂದ ಹೇಳುತ್ತಿದ್ದಾರೆ. ಇದರಲ್ಲಿರುವ ಸಮಸ್ಯೆ ಏನೆಂದರೆ, ಮಂಗಳೂರು ಘಟಕ ಉತ್ತಮವಾದಂತಹ ಘಟಕ, ಅಲ್ಲಿ ಮಂಗಳೂರು ಮತ್ತು ಬೆಂಗಳೂರು ನಡುವೆ ಸಂಚರಿಸುವ ವಾಹನಗಳಲ್ಲಿ ಪ್ರಯಾಣಿಕರು ಉತ್ತಮ ರೀತಿಯಲ್ಲಿ ನಮ್ಮ ಸಂಸ್ಥೆಗೆ ಸಹಕಾರ ನೀಡುತ್ತಿದ್ದಾರೆ. ಆದರೂ ಸಹ ಪ್ರಯಾಣಿಕರಿಗೆ ತೊಂದರೆಯಾಗುತ್ತಿದೆ ಎಂದು ನನ್ನ ಗಮನಕ್ಕೆ ತಂದಿದ್ದಾರೆ. ಅದರ ಬಗ್ಗೆ ನಾನು ಪರಿಶೀಲಿಸಿ ಪ್ರಯತ್ನ ಮಾಡುತ್ತೇನೆ. ಎನ್ನುವುದರ ಜೊತೆಗೆ ಏರ್-ಕಂಡೀಷನ್ಡ್ ಬಸ್ಸನ್ನು ಮಾದರಿಯಾಗಿ ನಮ್ಮ ರಾಜ್ಯದಲ್ಲಿ ಸಂಚರಿಸಬೇಕು ಎಂದು ಮಂಡಿಲಿಯವರು ನಿರ್ಣಯ ಮಾಡಿ, ಈಗಾಗಲೇ ಎರಡು ಬಸ್ ವಾರದೊಳಗಾಗಿ ಬರುತ್ತದೆ. ಅದು ಯಾವ ಭಾಗದಲ್ಲಿ ಸಂಚರಿಸಬೇಕೆಂದು ನಿರ್ಣಯ ಮಾಡಿ ನಾವು ಹೇಳುತ್ತೇವೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಅಧ್ಯಕ್ಷರೆ, ಬಸ್ಸುಗಳ ಒಳಗೆ ಮತ್ತು ಮೇಲೆ ಜನರು ಪ್ರಯಾಣ ಮಾಡುತ್ತಿದ್ದಾರೆ. ಬೆಂಗಳೂರು ನಗರದಲ್ಲಿ ಎಷ್ಟು ಬಸ್ಸುಗಳು ಇವೆ? ಹಾಗೂ ಬೆಂಗಳೂರು ನಗರದಲ್ಲಿ ಎಷ್ಟು ಜನ ಪ್ರಯಾಣ ಮಾಡುತ್ತಿದ್ದಾರೆ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಬೆಂಗಳೂರು ನಗರದಲ್ಲಿ ಸಾರಿಗೆ ಸಂಸ್ಥೆಯು 2400 ಬಸ್ಸುಗಳನ್ನು ಹೊಂದಿದೆ. ಇದರ ಜೊತೆಗೆ 108 ಬಸ್ಸುಗಳನ್ನು ಗುತ್ತಿಗೆ ಆಧಾರದ ಮೇಲೆ ಉಪಯೋಗಿಸಿಕೊಂಡು ಓಡಿಸುತ್ತಿದ್ದೇವೆ. ಇನ್ನೂ 400 ಬಸ್ಸುಗಳು ಬೆಂಗಳೂರು ಮಹಾನಾಗರ ಸಾರಿಗೆ ವ್ಯಾಪ್ತಿಯಲ್ಲಿ ಸಂಚರಿಸುವ ಅಗತ್ಯ ಇದೆ. ಅದಕ್ಕೆ ನಾವು ಟೆಂಡರ್ ಕರೆದಿದ್ದು, ಟೆಂಡರ್ ಸಹ ಬಂದಿದೆ. ಕೆಲವೇ ದಿನಗಳಲ್ಲಿ ಈ ಖಾಸಗಿ ಬಸ್ಸುಗಳನ್ನು ತೆಗೆದುಕೊಂಡು ಸಂಚಾರಕ್ಕೆ ಕೊಡುವ ಪ್ರಯತ್ನವನ್ನು ನಾವು ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ, ಎಂಟು ಸಾವಿರ ಹಳ್ಳಿಗಳಿಗೆ ಬಸ್ಸಿನ ವ್ಯವಸ್ಥೆ ಇಲ್ಲ, ಅದಕ್ಕೆ ರಸ್ತೆ ಸರಿಯಿಲ್ಲವೆಂದು ಹೇಳಿದರು. ಈ ವಿಚಾರದಲ್ಲಿ ನನ್ನ ಪ್ರಶ್ನೆ ಏನೆಂದರೆ, ಅನೇಕ ಕಡೆ ರಸ್ತೆ ಇಲ್ಲದೇ ಇರುವಂತಹ ಕಡೆ ಓಡಿಸುತ್ತೇವೆಂದು ಪರವಾನಗಿ ಪಡೆದು ಖಾಸಗಿಯವರನ್ನು ಆ ಬಸ್ಸುಗಳನ್ನು ಮುಖ್ಯವಾದ ರಸ್ತೆಗಳಲ್ಲಿ ಓಡಿಸುತ್ತಿದ್ದಾರೆ. ಇದು ಕೇವಲ ಪರವಾನಗಿಯನ್ನು ತೆಗೆದುಕೊಳ್ಳುವುದಕ್ಕೋಸ್ಕರ ಆ ರೀತಿ ಮಾಡಿರುತ್ತಾರೆ. ಇಂತಹ ವಿಷಯಗಳು ತಮ್ಮ ಗಮನಕ್ಕೆ ಬಂದಿದ್ದರೆ, ಆ ರೂಟ್ ಅನ್ನು ಯಾವ ಅಧಿಕಾರಿಗಳು ಮಂಜೂರು ಮಾಡತಕ್ಕಂಥ ಸಂದರ್ಭದಲ್ಲಿ ರಸ್ತೆ ಇದೆಯೊಂದು ಶಿಫಾರಸ್ಸು ಮಾಡಿದ್ದಾರೆ? ಮತ್ತು ಪರವಾನಗಿ ಪಡೆದಿರತಕ್ಕಂಥ ಮಾರ್ಗ ಬಿಟ್ಟು ಮುಖ್ಯವಾದ ಮಾರ್ಗಗಳಲ್ಲಿ ಓಡಿಸುತ್ತಿದ್ದಾರೆ, ಆ ಪರವಾನಗಿಯನ್ನು ರದ್ದುಪಡಿಸತಕ್ಕಂಥ ಕೆಲಸವನ್ನು ಮಾಡುತ್ತೀರಾ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಭೈರೇಗೌಡರು ಹಿರಿಯ ಸಚಿವರು, ಜೊತೆಗೆ ಅನುಭವಸ್ಥರು. ನಾನು ಒಟ್ಟು 8,000 ಹಳ್ಳಿಗಳು ಎಂದು ಹೇಳಲಿಲ್ಲ. 1569 ಹಳ್ಳಿಗಳಿಗೆ ಸರಿಯಾದ ರಸ್ತೆಯಿಲ್ಲವೆಂದು ಹೇಳಿದೆ. ಮಾನ್ಯ ಬೈರೇಗೌಡರು ಹೇಳಿದಂತಹ ವಿಚಾರ ನನ್ನ ಗಮನಕ್ಕೆ ಬಂದಿದೆ. ನನ್ನ ಗಮನಕ್ಕೆ ಬಂದ ತಕ್ಷಣ ಜಿಲ್ಲಾದ್ಯಂತ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡುವುದರ ಜೊತೆಗೆ,

ಎಲ್ಲಾ ಜಿಲ್ಲೆಯ ಮಾಹಿತಿಯನ್ನು ತರಿಸುವಂತೆ ಆದೇಶ ಮಾಡಿದ್ದೇನೆ. ಈಗ ಮಾನ್ಯ ಸದಸ್ಯರು ಹೇಳಿರುವುದನ್ನು ನಾನು ನೂರಕ್ಕೆ ನೂರು ಒಪ್ಪುತ್ತೇನೆ, ಹಾಗೂ ಮಾನ್ಯ ಸಿಂಧ್ಯರವರು ಮಂತ್ರಿಗಳಾಗಿದ್ದಂತಹ ಕಾಲದಲ್ಲಿ ಕೂಡ ನನ್ನ ಗಮನಕ್ಕೆ ಬಂದಿದೆ. ಆ ಮಾಹಿತಿಯನ್ನು ತರಿಸಿದ ನಂತರ, ಹಳ್ಳಿ ಇಲ್ಲದೇ ಇರುವಂತಹ ಕಡೆಯಲ್ಲೂ ಕೂಡ ಕೆಲವರು ಪರವಾನಗಿಯನ್ನು ತೆಗೆದುಕೊಂಡಿರುವುದು ನನ್ನ ಗಮನಕ್ಕೆ ಬಂದಿದೆ. ಜೊತೆಗೆ ರಾಷ್ಟ್ರೀಕರಣವಾದಂತಹ ಮಾರ್ಗಗಳಲ್ಲಿ ಸಹ ಪರವಾನಗಿ ತೆಗೆದುಕೊಂಡು ವಾಹನಗಳನ್ನು ಓಡಿಸುತ್ತಿರುವಂತಹ ಬಗ್ಗೆ ಕೂಡ ನನ್ನ ಗಮನಕ್ಕೆ ಬಂದಿದೆ. ಇದಕ್ಕೆ ಕಾನೂನಿನಲ್ಲಿ ಯಾವರೀತಿ ಕ್ರಮ ಜರುಗಿಸಬೇಕು ಎನ್ನುವದರ ಬಗ್ಗೆ ಜಂತನೆ ನಡೆಸುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಆ ಮಾಹಿತಿಯನ್ನು ಮಾನ್ಯ ಭೈರೆಗೌಡರ ಗಮನಕ್ಕೆ ತರುತ್ತೇನೆಂದು ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಡಾ॥ ರಾಜ್‌ಕುಮಾರ್‌ರವರು ಬಿಡುಗಡೆ ಆಯಿತು ಎಂದು ಸುದ್ದಿ ಬಂದಿದೆ.

ಅಧ್ಯಕ್ಷರು : ಆ ಮಾಹಿತಿ ಸರ್ಕಾರಕ್ಕೆ ತಿಳಿದು ಬಂದ ತಕ್ಷಣ ಸದನಕ್ಕೆ ವಿಷಯ ತಿಳಿಸುತ್ತೇನೆಂದು ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು 2000 ಮತ್ತು 2001ನೇ ಇಸವಿಯಲ್ಲಿ 2020 ವಾಹನಗಳನ್ನು ಖರೀದಿಸತಕ್ಕಂಥ ಯೋಜನೆ ಇದೆಯೆಂದು ಹೇಳಿದ್ದಾರೆ. ನನಗೆ ತಿಳುವಳಿಕೆ ಇರುವ ಹಾಗೆ ಸರ್ಕಾರಕ್ಕೆ ಮತ್ತು ಸಾರಿಗೆ ಸಂಸ್ಥೆಗೆ ಹಣಕಾಸಿನ ದೃಷ್ಟಿಯಿಂದ ಅದರದೇ ಆದ ತೊಂದರೆ ಇರುತ್ತದೆ. ಆದುದರಿಂದ 1995ನೇ ಇಸವಿಯಲ್ಲಿ ನಾವು ಅಧಿಕಾರಿದಲ್ಲಿ ಇದ್ದಂತಹ ಸಂದರ್ಭದಲ್ಲಿ ಒಂದು ತೀರ್ಮಾನ ಮಾಡಿದ್ದೆವು. ಸರ್ಕಾರ ಅಥವಾ ಸಾರಿಗೆ ಸಂಸ್ಥೆ ಎಲ್ಲಾ ಬಸ್ಸುಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ಅದಕ್ಕೋಸ್ಕರ ಖಾಸಗಿ ಬಸ್ಸುಗಳನ್ನು ಸರ್ಕಾರದ ಸ್ವಾಮ್ಯದಲ್ಲಿ ಇರತಕ್ಕಂಥಾದ್ದನ್ನು ಸಾರಿಗೆ ಸಂಸ್ಥೆಗೆ ತೆಗೆದುಕೊಂಡು ನಡೆಸುವುದಕ್ಕೆ ಅವಕಾಶ ಮಾಡಿಕೊಳ್ಳುವುದು ಸೂಕ್ತ ಎಂದು ತೀರ್ಮಾನ ಆಗಿತ್ತು. ಈಗಾಗಲೇ ನೂರರಿಂದ ನೂರ-ಇಪ್ಪತ್ತು ಬಸ್ಸುಗಳು ಸಂಚರಿಸುತ್ತಿವೆ ಎಂದು ಮಾನ್ಯ ಮಂತ್ರಿಯವರು ಹೇಳಿದ್ದಾರೆ. ಆಗ ಸರ್ಕಾರಿ ಆಜ್ಞೆ 400 ಬಸ್ಸುಗಳಿಗೆ ಆಗಿತ್ತು. ಏಕೆಂದರೆ ಬೆಂಗಳೂರು ನಗರ ಟೋಟಲಿ ನ್ಯಾಷನಲೈಜ್ಡ್ ಏರಿಯಾವಾಗಿತ್ತು, ಅದಕ್ಕೋಸ್ಕರ ಸರ್ಕಾರದಿಂದ ಸ್ಪೆಷಲ್ ಪರ್ಮಿಷನ್ ಬೇಕಾಗಿತ್ತು, ಅದನ್ನು ಸರ್ಕಾರದಿಂದ ಕೊಟ್ಟಿದೆ. ಆ 400 ಬಸ್ಸುಗಳನ್ನು ಈ ವರ್ಷ ಖಾಸಗಿಯವರಿಂದ ತೆಗೆದುಕೊಳ್ಳುತ್ತಿದ್ದೀರಾ? ಇನ್ನು ಎರಡನೆಯದಾಗಿ, ಅನೇಕ ಜನ ಗೌರವಾನ್ವಿತ ಶಾಸಕರು ರಾಷ್ಟ್ರೀಕರಣವಾದಂತಹ ಪ್ರದೇಶದಲ್ಲಿ ಹೆಚ್ಚಿಗೆ ಟ್ರಿಪ್‌ಗಳನ್ನು ಮಾಡಬೇಕೆಂದು ಹೇಳಿದ್ದಾರೆ. ಮಾನ್ಯ ಮಂತ್ರಿಯವರು ಬೇರೆ ಪ್ರಶ್ನೆಗೆ ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಈ ಬಸ್ಸುಗಳನ್ನು ಕ್ಯಾನ್ಸಲ್ ಮಾಡಿರುವಂಥಾದ್ದನ್ನು ಒಪ್ಪಿದ್ದಾರೆ. ಅದಕ್ಕೋಸ್ಕರ ನನ್ನ ಪ್ರಶ್ನೆ ಏನೆಂದರೆ, ಮೊದಲನೆಯದಾಗಿ, ಈಗಾಗಲೇ ಸರ್ಕಾರ ಆಜ್ಞೆ ಮಾಡಿರುವಂಥಾ 400 ಬಸ್ಸುಗಳನ್ನು ಈ ವರ್ಷ ತೆಗೆದುಕೊಳ್ಳುತ್ತೀರಾ? ಎರಡನೆಯದಾಗಿ, ಇದು ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾದಂಥ ಆಜ್ಞೆಯಾಗಿದೆ. ಇದೇ ರೀತಿಯಾಗಿ ಖಾಸಗಿ ಬಸ್ಸುಗಳನ್ನು ಗುಲ್ಬರ್ಗಾದಲ್ಲಿರುವಂತಹ ಮತ್ತು ಹುಬ್ಬಳ್ಳಿಯಲ್ಲಿರುವಂತಹ ಕಾರ್ಪೊರೇಷನ್‌ಗಳಿಗೆ, ಮತ್ತು

ಕೆ.ಎಸ್.ಆರ್.ಟಿ.ಸಿ.ಗೆ ತೆಗೆದುಕೊಂಡು ಮಾಡುವುದಕ್ಕೆ ಸಾಧ್ಯವಿಲ್ಲವೇನು? ನಾನು ಹೇಳುವುದೇನೆಂದರೆ, 1 ಕಿ.ಮೀ. ಸಾರಿಗೆ ಬಸ್ಸುಗಳು ಓಡಬೇಕೆಂದರೆ ಸಿ.ಪಿ.ಕೆ.ಎಂ. ಅಂದರೆ (ಕಾಸ್ಟ್ ಪರ್ ಕಿಲೋ ಮೀಟರ್) 10 ರೂ, 10.50, 10.60 ಪೈಸೆ ಯಾಗಬಹುದು. ಅದೇ ಖಾಸಗಿಯವರಿಂದ ಬಸ್ಸು ತೆಗೆದುಕೊಂಡರೆ ಅವರು 10 ರೂಪಾಯಿಗೆ 10.50 ಪೈಸೆಗೆ ಬರುತ್ತಾರೆ. ಅಲ್ಲೂ ಸಹ ಒಂದು ಕಿಲೋಮೀಟರ್‌ಗೆ 4.5 ಪೈಸೆಯೆಂತೆ ಹಣ ಉಳಿತಾಯವಾಗುತ್ತದೆ. ಅದುದರಿಂದ ನನ್ನ ಸಲಹೆ ಪ್ರಶ್ನೆಯ ರೂಪದಲ್ಲಿ, ಈ 400 ಬಸ್ಸುಗಳನ್ನು ತೆಗೆದುಕೊಳ್ಳುವಂಥಾದ್ದು, ಮತ್ತೆ ಇನ್ನು ಉಳಿದಿರುವಂಥ ನಮ್ಮ ಗ್ರಾಮೀಣ ಪ್ರದೇಶದ ಜನರಿಗೆ, ರೈತರಿಗೆ, ಅನುಕೂಲವಾಗುವ ದೃಷ್ಟಿಯಿಂದ ಮತ್ತೊಂದು ಸರ್ಕಾರಿ ಆಜ್ಞೆಯನ್ನು ಮಾಡಿ ಇನ್ನು 800-1000 ಬಸ್ಸುಗಳನ್ನು ಖಾಸಗಿಯವರಿಂದ ತೆಗೆದುಕೊಂಡು ಈ ಮೂರು ಸಂಸ್ಥೆಗಳನ್ನು ಏಕೆ ನಡೆಸಬಾರದು? ಇದನ್ನು ತಾವು ಪರಿಶೀಲನೆ ಮಾಡುವುದಕ್ಕೆ ಸಾಧ್ಯವೇ?

ಶ್ರೀ ಸಿ.ಆರ್. ಸಗೀರ್ ಅಮ್ಮದ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಪಿ.ಜಿ.ಆರ್. ಸಿಂಧ್ಯರವರ ಅನುಭವವೇ ನನ್ನ ಅನುಭವವಾಗಿದೆ, ಏಕೆಂದರೆ ಅವರು ಕೆಲವು ಒಳ್ಳೆಯ ವಿಚಾರಗಳನ್ನು ಸಲಹೆ ಮಾಡಿದ್ದಾರೆ. ಇದನ್ನು ನಾನು ಪದೇ ಪದೇ ಹೇಳುತ್ತೇನೆ, ಏಕೆಂದರೆ ಒಂದು ಸಂಸ್ಥೆಯನ್ನು ಉತ್ತಮವಾದಂತಹ ರೀತಿಯಲ್ಲಿ ನಡೆಸಬೇಕೆಂದರೆ ಅದಕ್ಕೆ ಜೀವ ಕೊಡುವುದರ ಜೊತೆಗೆ ಒಂದು ಶಕ್ತಿಯನ್ನು ಅವರು ಕೊಟ್ಟಿದ್ದಾಕೆ. ಮಾನ್ಯ ಸಿಂಧ್ಯರವರು ಹೇಳಿದಂತೆ ಹಿಂದೆ ಸರ್ಕಾರ ಮಾಡಿರುವಂಥ ತೀರ್ಮಾನದಂತೆ ನಮ್ಮ ಸರ್ಕಾರ ಗುತ್ತಿಗೆಯ ಆಧಾರದ ಮೇಲೆ ಈ ವಾಹನಗಳನ್ನು ತೆಗೆದುಕೊಳ್ಳುವುದರ ಬಗ್ಗೆ ನಾವು ಟೆಂಡರ್ ಅನ್ನು ಕರೆದಿದ್ದೆವು. ಅದರಲ್ಲಿ ಬಹಳಷ್ಟು ಜನರು ಪಾರ್ಟಿಸಿಪೇಟ್ ಮಾಡಿ ಬಸ್ಸುಗಳನ್ನು ಒದಗಿಸಿಕೊಡುತ್ತೇವೆಂದು ಮುಂದೆ ಬಂದರು. ನಮ್ಮ ಹಿಂದಿನ ದರ ಕಿ.ಮೀಗೆ 9.60 ಪೈಸೆ ಎಂದು ನಿಗದಿ ಪಡಿಸಿದ್ದೇವೆ. ಆ ದರಕ್ಕೆ ಕೇವಲ 108 ಬಸ್ಸುಗಳವರು ಮಾತ್ರ ಬಂದರು ಉಳಿದವರು ಬರುವುದಕ್ಕೆ ಸಾಧ್ಯವಾಗಲಿಲ್ಲ, ನಾವು ಮತ್ತೆ ಒಂದು ತಿಂಗಳ ಹಿಂದೆ ಟೆಂಡರ್ ಕರೆದಿದ್ದೇವೆ. ಬೆಂಗಳೂರು ನಗರಕ್ಕೆ 400 ಬಸ್ಸುಗಳ ಅಗತ್ಯತೆ ಇದೆ ಎಂದು ಹೇಳಿದ್ದೇವೆ. ಇದರಲ್ಲಿ ಬಹಳಷ್ಟು ಜನರು ಭಾಗವಹಿಸಿದ್ದಾರೆ, ಈಗ ಅದರ ಫೈನಲೈಜ್ ಮಾಡಬೇಕಾಗಿದೆ, ಈಗಾಗಲೇ 225 ಜನರು ಮುಂದೆ ಬಂದಿದ್ದು ದರವನ್ನು ನಿಗದಿ ಮಾಡಬೇಕಾಗಿದೆ, ಅದನ್ನು ಮಾಡಿದ ತಕ್ಷಣವೇ ಈ ಬಸ್ಸುಗಳ ಸಂಚಾರದ ವ್ಯವಸ್ಥೆಯನ್ನು ನಾವು ಬೆಂಗಳೂರು ನಗರದಲ್ಲಿ ಮಾಡುತ್ತೇವೆ. ಇನ್ನು ಹಿಂದೆ ಮಾಡಿದ್ದ 400 ಬಸ್ಸುಗಳ ಅಗತ್ಯತೆಯನ್ನು ಮಂಡಳಿಯಲ್ಲಿ ತೀರ್ಮಾನ ಮಾಡಿದ್ದೇವೆ. ಇದನ್ನು ಬೆಂಗಳೂರು ನಗರದಲ್ಲಿ ಮಾಡುತ್ತೇವೆ, ಇದರ ಜೊತೆಗೆ ಮಾನ್ಯ ಸಿಂಧ್ಯರವರು ಹೇಳಿದ ಹಾಗೆ ಇನ್ನು ಇತರೇ ಪ್ರದೇಶಗಳು ಅವು ಮೈಸೂರು ನಗರ ವಿರಬಹುದು, ಬೆಳಗಾಂ ಇರಬಹುದು, ಹುಬ್ಬಳ್ಳಿ ಇರಬಹುದು, ಅಥವಾ ಮಹಾನಗರಪಾಲಿಕೆಯನ್ನು ಹೊಂದಿರುವಂತಹ ನಗರ ಪ್ರದೇಶಗಳು ಇರಬಹುದು, ಇದೇ ಮಾದರಿಯಲ್ಲಿ ಖಾಸಗಿ ಬಸ್ಸುಗಳನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುವುದರ ಬಗ್ಗೆಯೂ ಮಂಡಳಿ ತೀರ್ಮಾನ ಮಾಡಿದೆ. ಇದರ ಬಗ್ಗೆ ಆಯಾ ವಿಭಾಗಗಳ ವ್ಯವಸ್ಥಾಪಕರಿಗೂ ಸೂಚನೆಯನ್ನು ಕೊಟ್ಟಿದ್ದೇವೆ. ಮುಂದಿನ ದಿವಸಗಳಲ್ಲಿ ಇದೇ ರೀತಿಯಲ್ಲಿ ಗುತ್ತಿಗೆಯ ಆಧಾರದ ಮೇಲೆ ಬಸ್ಸುಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ತೀರ್ಮಾನವನ್ನು ಮಾಡಿದೆ.

ಅಧ್ಯಕ್ಷರು : ಇನ್ನು ನಮ್ಮ ಮುಂದೆ 8 ಪ್ರಶ್ನೆಗಳು ಬಾಕಿ ಇವೆ, ಇದರ ಮೇಲೆ ತಮಗೆ ಬಿಟ್ಟಿದ್ದು, ಸಮಯ ಇರುವಂಥಾದ್ದು ಇನ್ನು ಕಾಲು ಗಂಟೆ ಮಾತ್ರ. ಆದುದರಿಂದ ಮಾನ್ಯ ಬಸವರಾಜುರವರು, ಶ್ರೀ ಶಿವನಾಂದ ಪಾಟೀಲ್ ಹಾಗೂ ವಿ. ಕೃಷ್ಣಪ್ಪನವರು ಮಾತ್ರ ಮಾತನಾಡಲು ಅವಕಾಶ ಕೊಡುತ್ತೇನೆ.

ಶ್ರೀ ಹೆಚ್.ಸಿ. ಬಸವರಾಜು : ಮಾನ್ಯ ಅಧ್ಯಕ್ಷರೆ ಕಳೆದ ಮೂರು ವರ್ಷಗಳಿಂದ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಎಷ್ಟು ನಷ್ಟ ಅನುಭವಿಸಿದೆ?.....

(ಗೊಂದಲ)

ಶ್ರೀ ಬಿ. ಶಿವರಾಮು : ಮಾನ್ಯ ಅಧ್ಯಕ್ಷರೆ, ತಾವು ಒಂದು ಪ್ರಶ್ನೆಗೆ ಎರಡು ಸಪ್ಲಿಮೆಂಟರಿ ಪ್ರಶ್ನೆಯನ್ನು ಕೇಳುವಂತೆ ನಿಗದಿ ಮಾಡಿದರೆ ಒಳ್ಳೆಯದು.

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೆ, ತಾವು ಏಕೆ ಅವಕಾಶವನ್ನು ಕೊಡುತ್ತೀರಿ? ಕೊಡಬೇಡಿ. ತಾವು ಟೈಮ್ ಕೊಡುತ್ತೀರಿ ಮತ್ತೆ ಅವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೀರಿ!

ಅಧ್ಯಕ್ಷರು : ನೀವು ಕೈ ಎತ್ತಿ ಮಾತನಾಡಲು ಅವಕಾಶ ಕೊಡಿ, ಎಂದರೆ ಕೊಡೋಣ. ಈ ಕಡೆ ಕೈ ಎತ್ತಿ ಮಾತನಾಡಲು ಅವಕಾಶ ಕೇಳಿದರು, ಕೊಟ್ಟಿದ್ದೇನೆ. ನೀವು ಕೈ ಎತ್ತಿ, ಅವಕಾಶವನ್ನು ಕೊಡೋಣ.

ಶ್ರೀ ಬಿ.ಆರ್. ನೀಲಕಂಠಪ್ಪ : ಬೇಕಾಗಿಲ್ಲ, ಇಲ್ಲಿ ಸಪ್ಲಿಮೆಂಟರಿ ಎಂದು ತಾವು ನಾಲ್ಕೈದು ಜನರಿಗೆ ಮಾತನಾಡಲು ಅವಕಾಶವನ್ನು ಕೊಟ್ಟರೆ ಹೇಗೆ?

ಅಧ್ಯಕ್ಷರು : ತಮಗೂ ಅವಕಾಶವನ್ನು ಕೊಡೋಣ, ನಾನು ಇಲ್ಲವೆಂದು ಹೇಳುತ್ತಿಲ್ಲವಲ್ಲಾ.....

(ಗೊಂದಲ)

ಶ್ರೀ ಹೆಚ್.ಸಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಕಳೆದ ಮೂರು ವರ್ಷಗಳಿಂದ ಎಷ್ಟು ನಷ್ಟವನ್ನು ಅನುಭವಿಸಿದೆ? ಧೃಡೀಕರಣವಾದಂತಹ ನಷ್ಟ ಎಷ್ಟು? ಇದನ್ನು ಭರಿಸುವಂಥಾದ್ದಕ್ಕೆ ಏನೇನು ಕ್ರಮವನ್ನು ಸರ್ಕಾರ ತೆಗೆದುಕಕೊಂಡಿದೆ.

ಅಧ್ಯಕ್ಷರು : ತಾವು ಇದರ ಬಗ್ಗೆ ಬೇರೆ ಪ್ರಶ್ನೆ ಕೇಳಿ ಈಗ ನೀವು ಕೇಳುತ್ತಿರುವಂಥಾದ್ದಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಹೆಚ್.ಸಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ಇನ್ನು ಎರಡನೆಯದಾಗಿ, ಬಸ್ಸು ನಿಲ್ದಾಣಗಳಲ್ಲಿ ಇರುವಂತಹ ಹೋಟೆಲ್‌ಗಳಲ್ಲಿ ಆಹಾರ ಪದಾರ್ಥಗಳು ಶುಚಿತ್ವದಿಂದ ಕೂಡಿರುವುದಿಲ್ಲ, ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ, ಮತ್ತೆ ಕೆ.ಎಸ್.ಆರ್.ಟಿ.ಸಿ.ಯಲ್ಲಿ....

ಅಧ್ಯಕ್ಷರು : ಇಲ್ಲ, ಒಬ್ಬೊಬ್ಬರು ಮೂರು ಪ್ರಶ್ನೆಗಳನ್ನು ಕೇಳಿದರೆ ಹೇಗೆ? ಅದಕ್ಕೆ ಮಾನ್ಯ ಮಂತ್ರಿಯವರು ಉತ್ತರವನ್ನು ಹೇಳುವುದಕ್ಕಾಗುವುದಿಲ್ಲ. ತಾವು ಏನಿದ್ದರೂ ಎರಡು ಪ್ರಶ್ನೆಗಳನ್ನು ಕೇಳಬಹುದು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದಂತಹ ಮುಖ್ಯವಾದಂತಹ ಪ್ರಶ್ನೆ, ಲಾಭ ಮತ್ತು ನಷ್ಟದ ಬಗ್ಗೆ ಕೇಳಿದ್ದಾರೆ. ಅದರ ಬಗ್ಗೆ ಈಗ ನನ್ನ ಬಳಿ ಮಾಹಿತಿ ಇಲ್ಲ, ಇದಕ್ಕೆ ಮಾನ್ಯ ಸದಸ್ಯರು ಪ್ರತ್ಯೇಕವಾಗಿ ಪ್ರಶ್ನೆಯನ್ನು ಹಾಕಬೇಕಾಗುತ್ತದೆ. ಇನ್ನು ಎರಡನೆಯದಾಗಿ ಮಾನ್ಯ ಸದಸ್ಯರು ಬಸ್ಸು ನಿಲ್ದಾಣಗಳಲ್ಲಿ ನಾಗರೀಕ ಸವಲತ್ತುಗಳ ಬಗ್ಗೆ ಕೇಳಿದ್ದಾರೆ. ನಾನು ಪ್ರತಿ ಬಸ್ ನಿಲ್ದಾಣಕ್ಕೂ ಭೇಟಿ ಕೊಡುತ್ತಿದ್ದೇನೆ. ನನಗೂ ಸಹ ನಾಗರೀಕರಿಗೆ ಸವಲತ್ತುಗಳನ್ನ ಒದಗಿಸುವುದರ ಬಗ್ಗೆ ಆಸಕ್ತಿ ಇದೆ, ಸಾಧ್ಯವಾದಷ್ಟು ಮಟ್ಟಿಗೆ ಈ ಸವಲತ್ತುಗಳನ್ನು ನಾನು ಒದಗಿಸಿ ಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ನೀಲಕಂಠಪ್ಪನವರೆ, ತಾವು ಮಾತನಾಡಿ.

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೆ, ನಾನು ಹೇಳುವಂಥಾದ್ದು ಏನೆಂದರೆ, ಸೆಪ್ಲಿಮೆಂಟರಿ ಪ್ರಶ್ನೆಯನ್ನು ಕೇಳುವುದಕ್ಕೆ ಒಬ್ಬರಿಗೆ ಮಾತ್ರ ಅವಕಾಶ ಕೊಡಿ, ಎಲ್ಲರಿಗೂ ಕೊಟ್ಟರೆ ನಮ್ಮ ಪ್ರಶ್ನೆಗಳು ಕೊನೆಗೆ ಹಾಗೆ ಉಳಿಯುತ್ತವೆ.

Mr. SPEAKER : It depends upon the importance of the question. ಅದು ನನಗೆ ಗೊತ್ತಿದೆ. ಈಗ ತಾವು ಪ್ರಶ್ನೆಯನ್ನು ಕೇಳಿ.

(ಗೊಂದಲ)

ಶ್ರೀ ಬಿ.ಆರ್. ನೀಲಕಂಠಪ್ಪ : ತಾವು ಇಂಪಾರ್ಟ್‌ಂಟ್ ಅಂದರೆ ಏನು? ಅದನ್ನು ತಾವು ಕಂಟ್ರೋಲ್ ಮಾಡಿ.

ಅಧ್ಯಕ್ಷರು : ಆಯಿತು, ಈಗ ತಾವು ದಯವಿಟ್ಟು ಪ್ರಶ್ನೆಯನ್ನು ಕೇಳಿ.

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೆ, ನಾನು ಕೇಳುವಂತಹ ಪ್ರಶ್ನೆ ಏನೂ ಇಲ್ಲ. ಮಾನ್ಯ ಸದಸ್ಯರುಗಳು ಕೇಳುವಂತಹ ಪ್ರಶ್ನೆಗಳನ್ನು ಕಂಟ್ರೋಲ್ ಮಾಡಿ.

(ಗೊಂದಲ)

ಉತ್ತರಹಳ್ಳಿ ಕ್ಷೇತ್ರದಲ್ಲಿ ಆಶ್ರಯ ಸಮಿತಿ ರಚನೆ

428 - ಶ್ರೀ ಆಶೋಕ್ . ಆರ್ (ಉತ್ತರ ಹಳ್ಳಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರಹಳ್ಳಿ ವಿಧಾನಸಭೆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಆಶ್ರಯ ಸಮಿತಿ ಈವರೆಗೆ ರಚನೆಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಹಾಗಿದ್ದಲ್ಲಿ ಈವರೆಗೆ ರಚನೆಯಾಗದಿರಲು ಕಾರಣವೇನು?

ಆ) ಈ ಸಮಿತಿಗಳನ್ನು ಯಾವಾಗ ರಚನೆ ಮಾಡಲಾಗುವುದು?